# ಕುಂಬಾರ ಮತ್ತು ಜೇಡಿಮಣ್ಣಿನ ಕಥೆ

ಕಾಡಿನ ಕಾಲುದಾರಿಯ ಬಳಿಯಲ್ಲಿ ಒಂದು ಮುದ್ದೆ ಜೇಡಿಮಣ್ಣು ಬಿದ್ದಿತ್ತು. ಅದಕ್ಕೆ ಸದಾ ದುಃಖ. "ಅಯ್ಯೋ! ಇಲ್ಲಿ ಯಾರೂ ಇಲ್ಲ. ನಗರದಲ್ಲಿದ್ದರೆ ಎಷ್ಟೊಂದು ಸಂಭ್ರಮ! ಬಣ್ಣ ಬಣ್ಣದ ಜನರು... ಬಣ್ಣಬಣ್ಣದ ವಸ್ತುಗಳು... ಕಿವಿಗೆ ಇಂಪಾದ ಮಾತುಗಳು..." ಇದಕ್ಕಾಗಿ ನಗರದಲ್ಲಿರಬೇಕೆಂದು ಅದರ ಆಸೆ. ಅಪರೂಪಕ್ಕೊಮ್ಮೆ ಅಲ್ಲಿ ಹಾದುಹೋಗುವ ಜನ, ಪಶು-ಪಕ್ಷಿಗಳನ್ನು ಕಂಡು ಅದು ನಿಟ್ಟುಸಿರಿಡುತ್ತಾ ಹಂಬಲಿಸುತ್ತಿತ್ತು.

ಒಂದುದಿನ ಆ ದಾರಿಯಾಗಿ ಬಂದ ಕುಂಬಾರನೊಬ್ಬನ ಕಣ್ಣಿಗೆ ಈ ಸೊಗಸಾದ ಜೇಡಿಮಣ್ಣು ಕಂಡಿತು. ಅವನು ಅದನ್ನು ಮೆಲ್ಲನೆ ಎತ್ತಿ ತನ್ನ ಚೀಲಕ್ಕೆ ಸೇರಿಸಿದಾಗ ಮಣ್ಣಿಗೆ ಖುಷಿಯೋ ಖುಷಿ! ಕನಸು ಕಾಣುತ್ತಾ ದಾರಿ ಸಾಗಿತು.

ಊರು ತಲುಪಿದ ಕುಂಬಾರನು ತನ್ನ ಜೇಡಿಮಣ್ಣಿನ ಹೊಂಡಕ್ಕೆ ಅದನ್ನು ಎಸೆದನು. ತಾನು ಇಲ್ಲಿ ಸುಖವಾಗಿ ಇತರರಂತೆಯೇ ಇರಬಹುದೆಂದು ಮಣ್ಣಿಗೆ ತುಂಬಾ ಸಂತೋಷ! ಮರುದಿನ ನಸುಕಿನಲ್ಲೇ ತನ್ನ ಮೇಲೆ ಎಂಥದೋ ನೀರು ಬಿದ್ದಾಗ ಸುಖನಿದ್ರೆಯಲ್ಲಿದ್ದ ಮಣ್ಣಿನ ಮುದ್ದೆಗೆ ತಟ್ಟನೆ ಎಚ್ಚರವಾಯಿತು. ಮನೆಯ ಜನರು ಹೊಂಡಕ್ಕಿಳಿದು ಮಣ್ಣು ಹದಗೊಳಿಸಲು ಪೂರ್ಣಶಕ್ತಿಯಿಂದ ತುಳಿಯಲಾರಂಭಿಸಿದರು. "ಅಯ್ಯೋ... ಅಯ್ಯೋ..". ಮಣ್ಣಿನ ಕೂಗು ಯಾರಿಗೂ ಕೇಳಿಸಲಿಲ್ಲ. ಬಹಳ ಸಮಯದವರೆಗೂ ಇದು ನಡೆಯಿತು.

ಕುಂಬಾರನು ತನ್ನ ಜೋಗಸೆಯಲ್ಲಿ ಮೆಲ್ಲನೆ ಬೇಕಾದಷ್ಟೇ ಹದವಾದ ಮಣ್ಣನ್ನೆತ್ತಿಕೊಂಡನು. ತನ್ನ ಚಕ್ರದ ಮೇಲೆ ಅದನ್ನಿರಿಸಿ ಗರಗರನೆ ತಿರುಗಿಸುವಾಗ... "ನಿಲ್ಲಿಸಿರಿ! ನನ್ನ ತಲೆ ಸುತ್ತುತ್ತಿದೆ..." ಎಂದು ಕೂಗಿಕೊಂಡ ಮಣ್ಣಿನ ಧ್ವನಿ ಕೇಳಿಸಲಿಲ್ಲ. ಮೆಲ್ಲನೆ ರೂಪುಗೊಂಡ ಪಾತ್ರೆಯಾಗಿ ಆ ಮಣ್ಣು ಕುಂಬಾರನ



✍ ಸುನಯನ ವಾಲ್ಟರ್ಸ್

ಕೈಗೆ ಬಂದಾಗ ಜೋಪಾನವಾಗಿ ಎತ್ತಿ ಬದಿಗಿರಿಸಿದ... ಎಲ್ಲಿ? ಆವಿಗೆಯ ಕೆಳಗೆ ಧಗಧಗನೆ ಉರಿಯುವ ಬೆಂಕಿ! ಪಾತ್ರೆ ಸುಡುವಾಗ ಮಣ್ಣಿನ ಕೂಗು ತಾರಕಕ್ಕೇರಿತು. ಸುಟ್ಟು ಹದವಾದ ಪಾತ್ರೆಯನ್ನು ಕುಂಬಾರನು ಎತ್ತಿಟ್ಟನು. ಸುಂದರವಾದ ಪಾತ್ರೆಯಾಗಿ ರೂಪಾಂತರಗೊಂಡ ಅದನ್ನು ನೋಡಿ ಆನಂದಿಸಿದನು. ತಕ್ಕ ಕಾಲದಲ್ಲಿ ಪಾತ್ರೆಯಾದ ಆ ಮಣ್ಣು ತನ್ನ ಕನಸಿನಂತೆ ಒಳ್ಳೆಯ ಮನೆಯಲ್ಲಿ ನೆಲೆಗೊಂಡಿತು.

ಐಗುಪ್ತ ದೇಶದಲ್ಲಿ ದಾಸತ್ವದಲ್ಲಿದ್ದ ಇಸ್ರಾಯೇಲ್ಯರನ್ನು ಬಿಡುಗಡೆಗೊಳಿಸಿದ ದೇವರು ಅವರನ್ನು ಸಕಲ ಸೊತ್ತುಗಳೊಡನೆ ಚಿನ್ನ-ಬೆಳ್ಳಿಗಳಿಂದ ಅಲಂಕರಿಸಿ ಹೊರತಂದನಷ್ಟೇ ಅಲ್ಲದೆ ಅದ್ಭುತವಾಗಿ ಅವರನ್ನು ನಡೆಸಿ ಹಾಲೂ ಜೇನೂ ಹರಿಯುವ ದೇಶದಲ್ಲಿ ಅವರನ್ನು ನೆಲೆಗೊಳಿಸಿದನು. ಆದರೆ ಮುಂದೆ ದೇವಜನರು ಪದೇ ಪದೇ ಆತನಿಗೆ ತಿರುಗಿಬಿದ್ದು ದೇಶವನ್ನು ಹೊಲೆಗಡೆಸಿದ್ದ ನಿಕೃಷ್ಟ ದಿನಗಳಲ್ಲಿ ಯೆರೆಮೀಯ ಪ್ರವಾದಿಯು ಕರ್ತನಿಂದ ನೇಮಿಸಲ್ಪಟ್ಟನು.

*"ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವುದಕ್ಕೆ ಮೊದಲೇ ತಿಳಿದಿದ್ದೆನು; ನೀನು ಉದರದಿಂದ ಬರುವುದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದೆನು"* (ಯೆರೆಮೀಯ 1:4). ಯೆರೆಮೀಯನನ್ನು ಪ್ರವಾದಿಯಾಗಿ ರೂಪಿಸಿದ ಕರ್ತನು ತನ್ನ ಉಗ್ರಕೋಪವನ್ನು ಪ್ರಕಟಿಸಿದಾಗಲೆಲ್ಲಾ, ಯೆರೆಮಿಯನು

ತನ್ನ ವಿಜ್ಞಾಪನೆಗಳನ್ನು ಮಾಡುತ್ತಿದ್ದದನ್ನು ಈ ಗ್ರಂಥದುದ್ದಕ್ಕೂ ಕಾಣುತ್ತೇವೆ.

18ನೇ ಅಧ್ಯಾಯದಲ್ಲಿ ಕುಂಬಾರನ ಸಾಮ್ಯ ಬರೆಯಲ್ಪಟ್ಟಿದೆ. ಯೆಹೋವನು ಆಜ್ಞಾಪಿಸಿದಂತೆ ಯೆರೆಮಿಯನು ತನ್ನ ಚಕ್ರದ ಮೇಲೆ ಕೆಲಸ ಮಾಡುತ್ತಿದ್ದ ಕುಂಬಾರನ ಮನೆಗೆ ಇಳಿದು ಹೋದನು.

*ಆ ಕುಂಬಾರನು ಜೇಡಿಮಣ್ಣಿನಿಂದ ಮಾಡುತ್ತಿದ್ದ ಪಾತ್ರೆಯು ಅವನ ಕೈಯಲ್ಲಿ ಕೆಟ್ಟುಹೋಗಲು ಪುನಃ ತನಗೆ ಸರಿತೋಚಿದ ಹಾಗೆ ಅದನ್ನು ಹೊಸಪಾತ್ರೆಯನ್ನಾಗಿ ಮಾಡಿದನು. ಆಗ ಯೆಹೋವನು ಅನುಗ್ರಹಿಸಿದ ವಾಕ್ಯ - ಇಸ್ರಾಯೇಲ್ ವಂಶದವರೇ, ಈ ಕುಂಬಾರನು ಮಾಡಿದಂತೆ ನಾನು ನಿಮ್ಮನ್ನು ಮಾಡಕೂಡದೋ? ಇಸ್ರಾಯೇಲ್ ಮನೆತನದವರೇ, ಜೇಡಿಮಣ್ಣು ಕುಂಬಾರನ ಕೈಯಲ್ಲಿ ಹೇಗೋ ಹಾಗೆಯೇ ನೀವು ನನ್ನ ಕೈಯಲಿದ್ದೀರಿ* (ಯೆರೆಮಿಯ 18:6).

*"ಯೆರೂಸಲೇಮೇ ನಿನ್ನನ್ನು ಕ್ಷಮಿಸಿ ಕ್ಷಮಿಸಿ ಸಾಕಾಯಿತು"* (ಯೆರೆ. 15:7) ಎಂದ ಯೆಹೋವನೇ ಪ್ರತಿಬಾರಿಯೂ ಮನಮರುಗಿ ತನ್ನ ವಾಗ್ದಾನವನ್ನು ನೆನಪಿಸಿಕೊಳ್ಳುವುದನ್ನು ಕಾಣುತ್ತೇವೆ.

*"ಚಿಯೋನೆಂಬ ತೋಟದ ಸಾಲುಗಿಡಗಳ ಮೇಲೆ ಬಿದ್ದು ಹಾಳುಮಾಡಿರಿ, ಆದರೆ ನಿರ್ಮೂಲ ಮಾಡಬೇಡಿರಿ. ಅದರ ರೆಂಬೆಗಳನ್ನು ತೆಗೆದು ಹಾಕಿರಿ. ಅವು ಯೆಹೋವನವುಗಳಲ್ಲ"* (ಯೆರೆ. 5:10). ಈ ಮಾತಿನಲ್ಲಿ ಯೆಹೋವನ ಉದ್ದೇಶವು ಸ್ಪಷ್ಟವಾಗಿದೆ.

ಹೀಗಿರುವಾಗ ದುಃಖ, ಸಂಕಟ ಆಪತ್ತುಗಳು ಬಂದಾಗ ಸಂಪೂರ್ಣ ಭರವಸೆಯಿಂದ ನಿರೀಕ್ಷಿಸಬೇಕೆಂಬುದು ದೇವರ ಅಪೇಕ್ಷೆಯಾಗಿದೆ. "ಈ ಕಷ್ಟ ನನಗೇ ಏಕೆ?" ಎಂಬುದು ಸಾಮಾನ್ಯವಾಗಿ ನಮ್ಮಲ್ಲಿ ಬರುವ ಆಲೋಚನೆಯಾಗಿದೆ. ದಾವೀದನ ಕೀರ್ತನೆಗಳಲ್ಲಿಯೂ ಕೆಲವೆಡೆ ಈ ಭಾವ ಕಂಡುಬರುತ್ತದೆ. *"ಯೆಹೋವನೇ ಯಾಕೆ ದೂರ ನಿಂತಿದ್ದೀ; ಕಷ್ಟಕಾಲದಲ್ಲಿ ಯಾಕೆ ಮರೆಯಾಗುತ್ತೀ?"* (ಕೀರ್ತನೆ 10:1).

*"ಯೆಹೋವನೇ ಎಷ್ಟರವರೆಗೆ ನನ್ನ ಕೈಬಿಟ್ಟಿರುವಿ?"* (ಕೀರ್ತನೆ 6:3). ಆದರೆ ಕೀರ್ತನೆ 8:45ರಲ್ಲಿ ದಾವೀದನು ಕರ್ತನ ಅನುಗ್ರಹವನ್ನೂ ನೆನಸಿಕೊಳ್ಳುತ್ತಾನೆ - *"ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ?"*

ಕಷ್ಟ, ಸಂಕಷ್ಟಗಳು ನಮ್ಮ ರೂಪಿಸುವಿಕೆಯ ಹಂತಗಳು ಮಾತ್ರ. ವಿವಿಧ ಕಾರ್ಯಗಳಿಗಾಗಿ ವಿವಿಧ ಪಾತ್ರೆಗಳು ಒಂದರಂತೆ ಇನ್ನೊಂದಿಲ್ಲ. ಮೋಶೆ, ಸಮುವೇಲ, ಯೆಶಾಯ, ಯೆರೆಮಿಯ, ಪೌಲ, ಇವರೆಲ್ಲರೂ ದೇವರು ಕರೆದಾಗ - ಇಗೋ ಇದ್ದೇನೆ - ಎಂದು ತಮ್ಮದೆಲ್ಲವನ್ನೂ ಬಿಟ್ಟು ವಿಧೇಯರಾದವರು. ಅವರ ಈ ಲೋಕದ ಜೀವನ ಕಷ್ಟಮಯವಾಗಿತ್ತು. ರಾಜಕುಮಾರನಂತೆ ಅರಮನೆಯಲ್ಲಿ ಬೆಳೆದ ಮೋಶೆಯು ದೇವರ ಕರೆಯಂತೆ ಇಡೀ ಜನಾಂಗವನ್ನೇ ವಾಗ್ದತ್ತ ದೇಶದತ್ತ ನಡೆಸುವಾಗ ಕೊನೆಗೆ ಸೋತುಹೋಗಿ... ನನಗೆ ಸಾಕಾಯಿತು ಎಂದ ಸಮಯವೂ ಬಂತು. ಲೌಕಿಕವಾಗಿ ಅವನು ಪಡೆದುದೇನು? ಆಸೆಪಟ್ಟು ಬೇಡಿಕೊಂಡರೂ ಅವನಿಗೆ ವಾಗ್ದತ್ತ ದೇಶವನ್ನು ಪ್ರವೇಶಿಸುವ ಹಕ್ಕು ಒದಗಿಬರಲಿಲ್ಲ. ಕಾರಣ ಒಂದು ಅವಿಧೇಯತೆ. ಆದರೆ ದೇವರ ನಿತ್ಯರಾಜ್ಯದ ಬಾಧ್ಯತೆ ಅವನಿಗೆ ಮೀಸಲಾಗಿತ್ತು.

*"ಯಾವನು ಯೆಹೋವನಲ್ಲಿ ನಂಬಿಕೆ ಇಟ್ಟಿದ್ದಾನೋ, ಯಾವನಿಗೆ ಯೆಹೋವನು ಭರವಸೆಯಾಗಿದ್ದಾನೋ ಅವನು ಧನ್ಯನು. ನೀರಾವರಿಯಲ್ಲಿ ನೆಡಲ್ಪಟ್ಟು ಹೊಳೆಯ ದಡದಲ್ಲಿ ತನ್ನ ಬೇರುಗಳನ್ನು ಹರಡಿ ಧಗೆಗೆ ಭಯಪಡದೆ ಹಸುರೆಲೆಯನ್ನು ಬಿಡುತ್ತಾ ಕ್ಷಾಮ ವರ್ಷದಲ್ಲಿಯೂ ನಿಶ್ಚಿಂತೆಯಾಗಿ ಸದಾ ಫಲಕೊಡುತ್ತಾ ಇರುವ ಮರಕ್ಕೆ ಸಮಾನನಾಗಿರುವವನು"* (ಯೆರೆಮಿಯ 17:7–8).

ದೇವರಲ್ಲಿ ಸಂಪೂರ್ಣವಾದ ಭರವಸೆ ಇಟ್ಟು ಮುಂದುವರೆಯುವಂತೆ ಆತನು ನಮಗೆ ಸಹಾಯ ಮಾಡಲಿ. ನೆನಪಿಡಬೇಕಾದುದೇನೆಂದರೆ, ಪಾತ್ರೆ ಮಾಡುವಾಗ ಆಕಾರ ಕೆಟ್ಟರೆ ಅದನ್ನು ಸರಿಪಡಿಸಬಹುದು; ಆದರೆ ಪಾತ್ರೆ ಮಾಡಿದ ಮೇಲೆ ಒಡೆದು ಹೋದರೆ ಅದು ಹೊಸರೂಪವನ್ನು ಪಡೆಯಲಾರದು. ಅದಕ್ಕೆ ನಾಶನವೇ ಗತಿ. ■